# ಸ್ವಾಮಿ ವಿವೇಕಾನಂದರ
# 150ನೇ ಜಯಂತಿ ಮಹೋತ್ಸವ
## ಭಾರತೀಯ ಆಧ್ಯಾತ್ಮಿಕ ಸಮ್ಮಿಲನ – 2012
( 2012, ಏಪ್ರಿಲ್ 20 ರಿಂದ ಏಪ್ರಿಲ್ 23)




## ಒಂದು ಮನವಿ

ಪ್ರಿಯ ಸ್ನೇಹಿತರೇ ಮತ್ತು ಭಕ್ತರೇ,

ವರ್ತಮಾನ ಯುಗದ ಪ್ರವಾದಿಯಾದ ಸ್ವಾಮಿ ವಿವೇಕಾನಂದರು ಅಖಂಡ ಮಾನವತೆಯ ಆಧ್ಯಾತ್ಮಿಕ ಚೇತನವನ್ನು ಜಾಗೃತಗೊಳಿಸಲು ಪ್ರಯತ್ನಿಸಿದ ಮಹಾಧೀರ ಸಂನ್ಯಾಸಿಯಾಗಿದ್ದಾರೆ. ಇಡೀ ಜಗತ್ತು, ಅದರಲ್ಲೂ ಭಾರತದೇಶವು ಸ್ವಾಮಿ ವಿವೇಕಾನಂದರ 150ನೇ ಜಯಂತಿ ಮಹೋತ್ಸವವನ್ನು ಆಚರಿಸಲು ಸನ್ನದ್ಧವಾಗಿರುವ ಈ ಶುಭಸಂದರ್ಭದಲ್ಲಿ, ಪಶ್ಚಿಮ ಬಂಗಾಳದ ಹೌರಾ ಜಿಲ್ಲೆಯ ಬೇಲೂರುಮಠದಲ್ಲಿರುವ ವಿಶ್ವವಿಖ್ಯಾತ ರಾಮಕೃಷ್ಣ ಮಠ ಮತ್ತು ರಾಮಕೃಷ್ಣ ಮಿಷನ್ ಮಹಾಸಂಸ್ಥೆಯ ಪ್ರಧಾನಕೇಂದ್ರವು, ತನ್ನ ನೂರಾರು ಶಾಖಾಕೇಂದ್ರಗಳ ಮೂಲಕ, ಈ ಮಹೋತ್ಸವವನ್ನು ಅದ್ದೂರಿಯಾಗಿ ಮತ್ತು ಸಮಂಜಸವಾದ ರೀತಿಯಿಂದ ಆಚರಿಸಲು, ಪ್ರಾದೇಶಿಕ ಹಾಗೂ ರಾಷ್ಟ್ರೀಯ ಹಂತಗಳಲ್ಲಿ ಹಲವಾರು ಕಾರ್ಯಕ್ರಮಗಳನ್ನು ಆಯೋಜಿಸಿದೆ.

ಈ ಸುಸಂದರ್ಭವನ್ನು, ರಾಮಕೃಷ್ಣ ಮಠ, ಬೇಲೂರುಮಠ – ಇದರ ಅಂಗಸಂಸ್ಥೆಯಾದ ಮೈಸೂರಿನ ಶ್ರೀರಾಮಕೃಷ್ಣ ಆಶ್ರಮವು ತನ್ನದೇ ಆದ ವಿಶಿಷ್ಟರೀತಿಯಲ್ಲಿ, 'ಭಾರತೀಯ ಆಧ್ಯಾತ್ಮಿಕ ಸಮ್ಮಿಲನ' ಎಂಬ ಬೃಹದ್ ಆಧ್ಯಾತ್ಮಿಕ ಸಮಾವೇಶದ ಮೂಲಕ ಆಚರಿಸಲು ನಿಶ್ಚಯಿಸಿದೆ. ಈ ಬೃಹತ್ ಕಾರ್ಯಕ್ರಮವು 2012, ಏಪ್ರಿಲ್ 20 ರಿಂದ ಏಪ್ರಿಲ್ 23 ರವರೆಗೆ ಮೈಸೂರಿನಲ್ಲಿ ಜರುಗಲಿದೆ. ಇದರ ಮುಖ್ಯ ಉದ್ದೇಶ ಸ್ವಾಮಿ ವಿವೇಕಾನಂದರ ಸ್ಫೂರ್ತಿದಾಯಕ ಸಂದೇಶದ ಕಡೆಗೆ ನಮ್ಮ ಯುವಪೀಳಿಗೆ ಆಕರ್ಷಿತರಾಗುವಂತೆ ಮಾಡುವುದು ಮತ್ತು ಜನಸಾಮಾನ್ಯರಲ್ಲಿ ಈ ಪ್ರವಾದಿಸಂತರ ಮಹಾನ್ ಕಾರ್ಯವಾಗಿದ್ದ ಆಧ್ಯಾತ್ಮಿಕ ಸಂಸ್ಕೃತಿಯ ಪುನರುತ್ಥಾನದ ಬಗ್ಗೆ ಅರಿವು ಮೂಡಿಸುವುದು. ರಾಜಾಜಿ (ಚಕ್ರವರ್ತಿ ರಾಜಗೋಪಾಲಾಚಾರಿ) ಅವರು ಸ್ವಾಮಿ ವಿವೇಕಾನಂದರ ಬಗ್ಗೆ ಹೇಳಿರುವ ಈ ಮಾತುಗಳು ಅತ್ಯಂತ ಸೂಕ್ತವಾದುವು: "ಸ್ವಾಮಿ ವಿವೇಕಾನಂದರು ಹಿಂದೂಧರ್ಮವನ್ನು ರಕ್ಷಿಸಿದರು ಮತ್ತು ಭಾರತವನ್ನೂ ಕಾಪಾಡಿದರು. ಅವರಿಲ್ಲದಿದ್ದರೆ, ನಾವು ನಮ್ಮ ಧರ್ಮವನ್ನು ಕಳೆದುಕೊಳ್ಳುತ್ತಿದ್ದೆವು ಹಾಗೂ ನಮ್ಮ ಸ್ವಾತಂತ್ರ್ಯವನ್ನೂ ಗಳಿಸಿಕೊಳ್ಳುತ್ತಿರಲಿಲ್ಲ. ಆದ್ದರಿಂದ ನಮ್ಮದೆಲ್ಲದಕ್ಕೂ ನಾವು ಸ್ವಾಮಿ ವಿವೇಕಾನಂದರಿಗೆ ಚಿರಋಣಿಯಾಗಿರಬೇಕು."

ಈ ಮಹಾಸಮ್ಮಿಲನದ ವಿಶಿಷ್ಟ ಅಂಶವೇನೆಂದರೆ, ವಿವಿಧ ಆಧ್ಯಾತ್ಮಿಕ ಸಂಪ್ರದಾಯಗಳಿಗೆ ಸೇರಿದ ಸುಪ್ರಸಿದ್ಧ ಸಂನ್ಯಾಸಿಗಳು, ಮಠಾಧೀಶರು ಇದರಲ್ಲಿ ಪಾಲುಗೊಳ್ಳುವರು. ನಮ್ಮ ಸಂಸ್ಕೃತಿಯ ಪ್ರಸಾರಕ್ಕೆ ಕಟಿಬದ್ಧರಾಗಿರುವ ಈ ಆಧ್ಯಾತ್ಮಿಕ ಜೀವಿಗಳು ಈ ಬಹುದೊಡ್ಡ ಸಂದರ್ಭದ ಸಾನ್ನಿಧ್ಯವನ್ನು ವಹಿಸಿ, ತಮ್ಮ ಸ್ಫೂರ್ತಿಯುತವಾದ ಮತ್ತು ಉದಾತ್ತ ಚಿಂತನಗಳ ಮೂಲಕ, ಭಾಗವಹಿಸುವ ಪ್ರತಿನಿಧಿಗಳಲ್ಲಿ ನಮ್ಮ ಧರ್ಮ ಮತ್ತು ಸಂಸ್ಕೃತಿಯ ಬಗ್ಗೆ ಅರಿವನ್ನು ಮೂಡಿಸಲಿದ್ದಾರೆ. ಈ ಸಂದರ್ಭದಲ್ಲಿ ಜನಸಾಮಾನ್ಯರಲ್ಲಿ ನಮ್ಮ ಆಧ್ಯಾತ್ಮಿಕ ಪರಂಪರೆಯ ಬಗ್ಗೆ ಪರಿಜ್ಞಾನ ಮೂಡಿಸುವ ಮತ್ತು ಹಿಂದೂಧರ್ಮದ ಆಧಾರಭೂತವಾದ ಐಕ್ಯಶಕ್ತಿಯನ್ನು ಕಂಡುಹಿಡಿದು, ಅದರ ವಿವಿಧ ಕವಲುಗಳನ್ನು ಏಕೀಕರಿಸುವ ಪ್ರಯತ್ನ ನಡೆಯಲಿದೆ.

ಭಾರತೀಯ ಆಧ್ಯಾತ್ಮಿಕ ಸಮ್ಮಿಲನವು ಹಬ್ಬದ ವಾತಾವರಣದಲ್ಲಿ 2012, ಏಪ್ರಿಲ್ 20ರಂದು ಉದ್ಘಾಟನೆಗೊಳ್ಳಲಿದೆ. ಹಲವಾರು ರೀತಿಯ ಕಾರ್ಯಕ್ರಮಗಳು, ಆಧ್ಯಾತ್ಮಿಕ ಸಂಸ್ಕೃತಿಯ ಪ್ರಸ್ತುತತೆಯ ಬಗೆಗಿನ ವಿಚಾರಗೋಷ್ಠಿಗಳು, ಸಾಂಸ್ಕೃತಿಕ ಕಾರ್ಯಕ್ರಮಗಳು ಮುಂತಾದವುಗಳ ಮೂಲಕ ಭಾಗವಹಿಸುವ ಪ್ರತಿನಿಧಿಗಳಿಗೆ ಆಧ್ಯಾತ್ಮಿಕ ಪರಿಸರದ ನಿರ್ಮಾಣವನ್ನು ಮಾಡುವ ಉದ್ದೇಶವನ್ನು ಈ ಸಮಾವೇಶ ಹೊಂದಿದೆ. ಈ ಸಮ್ಮೇಳನದಲ್ಲಿ ಒಟ್ಟಾರೆ 1600 ಆವಾಸಿ ಪ್ರತಿನಿಧಿಗಳು, 500 ವಸತಿರಹಿತ ಪ್ರತಿನಿಧಿಗಳು ಮತ್ತು ಮುಖ್ಯವಾಗಿ ಕರ್ನಾಟಕ, ತಮಿಳುನಾಡು, ಕೇರಳ ಮತ್ತು ಆಂಧ್ರಪ್ರದೇಶ ರಾಜ್ಯಗಳಿಂದ ಆಗಮಿಸುವ 200–300 ಸಾಧುಸಂತರು ಭಾಗವಹಿಸಲಿದ್ದಾರೆ.

ಈ ಮಹೋತ್ಸವವನ್ನು ಚಿರಸ್ಮರಣೀಯವಾಗಿ ಆಚರಿಸಲು ಅತಿ ದೊಡ್ಡ ಮೊತ್ತದ ಖರ್ಚು ಒದಗಲಿದೆ. ಸ್ವಾಮಿ ವಿವೇಕಾನಂದರ 150ನೇ ಜಯಂತಿ ಮಹೋತ್ಸವವನ್ನು ಅತಿ ವಿಜೃಂಭಣೆಯಿಂದ ಆಚರಿಸುವ ಈ ಉದಾತ್ತ ಕಾರ್ಯಕ್ಕೆ ಉದಾರವಾಗಿ ಹಣಸಹಾಯ ನೀಡಬೇಕೆಂದು, ನಮ್ಮೆಲ್ಲ ಭಕ್ತರು, ಹಿತೈಷಿಗಳು ಮತ್ತು ಪ್ರಬುದ್ಧ ನಾಗರಿಕರಲ್ಲಿ ಈ ಮೂಲಕ ಪ್ರಾರ್ಥಿಸುತ್ತಿದ್ದೇವೆ. ಹಾಗೆಯೇ ಸಮಾಜದ ಗಣ್ಯವ್ಯಕ್ತಿಗಳು, ಸಂಘಸಂಸ್ಥೆಗಳು, ವಾಣಿಜ್ಯ ಸಂಸ್ಥೆಗಳು, ಬ್ಯಾಂಕ್ ಮುಂತಾದ ಹಣಕಾಸು ಸಂಸ್ಥೆಗಳು ಯಾವುದಾದರೂ ಒಂದು ಅಧಿವೇಶನವನ್ನು ಪ್ರಾಯೋಜಿಸುವ ಮೂಲಕ ಸಹಭಾಗಿಗಳಾಗಬೇಕೆಂದು ವಿನಂತಿಸಿಕೊಳ್ಳುತ್ತಿದ್ದೇವೆ.

ಸ್ವಾಮಿ ವಿವೇಕಾನಂದರ 150ನೇ ಜನ್ಮಜಯಂತಿ ಮಹೋತ್ಸವಕ್ಕೆ ನೀಡುವ ಎಲ್ಲ ದೇಣಿಗೆಗಳಿಗೂ ವರಮಾನ ತೆರಿಗೆ ಕಾನೂನಿನ 80–G ಅಧಿನಿಯಮದ ಪ್ರಕಾರ ತೆರಿಗೆ ವಿನಾಯತಿ ಇದೆ. ಡಿ.ಡಿ. ಮತ್ತು ಚೆಕ್‌ಗಳನ್ನು **"Sri Ramakrishna Ashrama, Mysore"** – ಈ ಹೆಸರಿಗೆ ಬರೆದು, ಲಕೋಟೆಯ ಮೇಲೆ, '**150th Birth Anniversary Celebrations of Swami Vivekananda**' ಎಂದು ನಮೂದಿಸಿ, ಈ ವಿಳಾಸಕ್ಕೆ ಕಳಿಸಬೇಕಾಗಿ ವಿನಂತಿ : '**Sri Ramakrishna Ashrama, Yadavagiri, Mysore – 570 020.**'

ಸ್ವಾಮಿ ವಿವೇಕಾನಂದರ ಆಶೀರ್ವಾದ ನಮ್ಮನಿಮ್ಮೆಲ್ಲರ ಮೇಲೆ ಇರಲಿ ಎಂದು ಅವರನ್ನು ಪ್ರಾರ್ಥಿಸಿಕೊಳ್ಳೋಣ,


ಪ್ರೀತ್ಯಾದರಗಳೊಂದಿಗೆ,

ಭಗವತ್ಸೇವೆಯಲ್ಲಿ ತಮ್ಮವ
ಸ್ವಾಮಿ ಮುಕ್ತಿದಾನಂದ
ಅಧ್ಯಕ್ಷರು

e-mail : rkashram@gmail.com ; Phones: 0821 -2417444 / 2412424

ಸಂಪಾದಕೀಯ

ವಿವೇಕಾನಂದ ಚಿಂತನ



## ಚಿಕಾಗೋ ನಗರದಲ್ಲಿ

# ಚಮತ್ಕಾರ

ಅಮೆರಿಕದ ಚಿಕಾಗೋ ನಗರದಲ್ಲಿ ನಡೆದ ಸರ್ವ ಧರ್ಮ ಸಮ್ಮೇಳನದಲ್ಲಿ ಮಾಡಿದ ಪ್ರವಚನಗಳಲ್ಲಿ ಸ್ವಾಮಿ ವಿವೇಕಾನಂದರು ಭಾರತೀಯ ಧರ್ಮ ಮತ್ತು ಸಂಸ್ಕೃತಿಗಳ ಶ್ರೇಷ್ಠತೆಯನ್ನು ಜಗತ್ತಿನ ಜನತೆಯ ಮುಂದೆ ಮಂಡಿಸುತ್ತಾರೆ. ಪ್ರಾಚೀನ ಭರತಖಂಡ ರೂಪಿಸಿದ ಧಾರ್ಮಿಕ ಪ್ರಜ್ಞೆ, ಭಾರತದೇಶದ ಇಡೀ ಜನತೆಯ ಸಂದೇಶ ಸ್ವಾಮೀಜಿಯವರ ಮೂಲಕ ಹೀಗೆ ಪ್ರಕಟಗೊಂಡಿತು. ನಿವೇದಿತಾ ಮಾರ್ಮಿಕವಾಗಿ ಹೇಳುವಂತೆ, **"ಸ್ವಾಮಿ ವಿವೇಕಾನಂದರು ಸರ್ವಧರ್ಮ ಸಮ್ಮೇಳನದಲ್ಲಿ ನೀಡಿದ ಉಪನ್ಯಾಸಗಳ ಸ್ವರೂಪವನ್ನು ಹೀಗೆ ಸಂಕ್ಷೇಪವಾಗಿ ಹೇಳಬಹುದು: ಪ್ರಾರಂಭದಲ್ಲಿ ಹಿಂದೂಗಳ ಧಾರ್ಮಿಕ ಭಾವನೆಯನ್ನು ಕುರಿತು ಅವರು ಹೇಳ ಹೊರಟರು. ಆದರೆ ಅವರು ತಮ್ಮ ಉಪನ್ಯಾಸ ಮುಗಿಸಿದಾಗ, ಹಿಂದೂಧರ್ಮ ಪುನರ್‌ಸೃಷ್ಟಿಗೊಂಡಿತ್ತು."**

**ಮೊದಲ ಭಾಷಣ:** ಸ್ವಾಮಿ ವಿವೇಕಾನಂದರಿಗೆ ಅಪಾರ ಮನ್ನಣೆಯನ್ನು ಕೊಟ್ಟದ್ದು ಮತ್ತು ಇಂದಿಗೂ ಪ್ರಸಿದ್ಧವಾಗಿರುವುದು ೧೮೯೩ನೇ ಇಸವಿ, ಸೆಪ್ಟೆಂಬರ್ ೧೧ ರಂದು ಅವರು ಮಾಡಿದ ಮೊದಲ ಭಾಷಣವೇ. ಮೊಟ್ಟ ಮೊದಲನೆಯ ಬಾರಿಗೆ ಜಾಗತಿಕ ರಂಗದಲ್ಲಿ ಹಿಂದೂ ಧರ್ಮದ ವಿಶ್ವವ್ಯಾಪಕತೆಯನ್ನು ಪ್ರಸ್ತುತಪಡಿಸಿದ ಐತಿಹಾಸಿಕ ಭಾಷಣವಿದು. **"ಅಮೆರಿಕದ ಸಹೋದರ ಸಹೋದರಿಯರೇ"** ಎಂಬ ಸಂಬೋಧನಾವಾಕ್ಯವೇ ಭಾರತೀಯ ಸಂಸ್ಕೃತಿಯ ಸಾರಸರ್ವಸ್ವವಾದ ವಿಶ್ವಭ್ರಾತೃತ್ವವನ್ನು ಎತ್ತಿ ಹೇಳುವಂಥದ್ದು. ಸ್ವಾಮೀಜಿಯವರ ಹೃದಯದಾಳದಿಂದ, ಅನುಭೂತಿಯ ಅಂತರಾಳದಿಂದ ಹೊರಹೊಮ್ಮಿದ ಆ ಶಕ್ತಿಪುಂಜಿತವಾದ ಮಾತುಗಳಿಗೆ ಅಲ್ಲಿನ ಜನರು ಹೇಗೆ ಸ್ಪಂದಿಸಿದರೆಂಬುದು ಐತಿಹಾಸಿಕ ಸಂಗತಿ.

**ಕೃತಜ್ಞತಾ ಸಮರ್ಪಣೆ:** ಈ ವಿಶ್ವಮಾನವನ ವಿನೀತಭಾವನೆ ತಮ್ಮ ಭಾಷಣದ ಪ್ರಾರಂಭದಲ್ಲಿ ಅವರು ಅಮೆರಿಕದ ಜನತೆಗೆ ಸಲ್ಲಿಸುವ ಕೃತಜ್ಞತೆಗಳಲ್ಲಿ ವ್ಯಕ್ತವಾಗುತ್ತದೆ. **"ಧಾರ್ಮಿಕ ಸಹಿಷ್ಣುತೆಯಲ್ಲಿ ಮಾತ್ರವಲ್ಲ, ಎಲ್ಲ ಧರ್ಮಗಳೂ ಸ್ವೀಕಾರ ಯೋಗ್ಯ ಎಂಬುದನ್ನು ಜಗತ್ತಿಗೆ ಬೋಧಿಸಿದ ಧರ್ಮಕ್ಕೆ ನಾನು ಸೇರಿದವನು"** ಎಂಬ ಅವರ ಮುಂದಣ ನುಡಿಗಳಲ್ಲಿ, ಧರ್ಮಸಾಮರಸ್ಯದ ಪರಮೋಚ್ಚ ಆದರ್ಶವು ಪ್ರಕಟವಾಗುವುದನ್ನು ಕಾಣುತ್ತೇವೆ; ಹಾಗೆಯೇ ಆ ಧ್ಯೇಯವನ್ನು ತನ್ನ ಅಂತಸ್ಸತ್ವವನ್ನಾಗಿ ಸಹಸ್ರ ಸಹಸ್ರ ವರ್ಷಗಳ ಕಾಲ ಕಾಯ್ದಿರಿಸಿ ಕೊಂಡಿರುವ ಹಿಂದೂಧರ್ಮದ ಬಗ್ಗೆ ಸ್ವಾಮೀಜಿಗಿದ್ದ ಅಪಾರ ಅಭಿಮಾನವು ಸ್ಫುರಣವಾಗುವುದನ್ನು ಭಾವಿಸುತ್ತೇವೆ.

**ಭಾರತದ ವಿಶ್ವವೈಶಾಲ್ಯ:** ಸ್ವಾಮೀಜಿ ಇತಿಹಾಸದ ಮೇಧಾವಿ ವಿದ್ಯಾರ್ಥಿಯಾಗಿದ್ದರು. ಹಾಗೆಂದೇ ಜಗತ್ತಿನೆಲ್ಲೆಡೆ ಶೋಷಣೆಗೆ ಒಳಗಾದ ಯಹೂದಿಗಳು ಮತ್ತು ಪಾರ್ಸಿಗಳನ್ನು ಅಕ್ಕರೆಯಿಂದ ಬರಮಾಡಿಕೊಂಡ ಏಕಮೇವ ರಾಷ್ಟ್ರ ಭಾರತ ಎಂಬ ಐತಿಹಾಸಿಕ ಸತ್ಯವೊಂದನ್ನು ಅವರು ಸಭಿಕರ ಮುಂದಿಡುತ್ತಾರೆ. ಈ ಉದಾರ ಭಾವನೆಗೆ ಪುಷ್ಟಿ ನೀಡುವ ಎರಡು ಪ್ರಾಚೀನ ಶ್ಲೋಕಗಳನ್ನು ಸ್ವಾಮೀಜಿ ಉದಹರಿಸುತ್ತಾರೆ. ಧಾರ್ಮಿಕ ಮಾರ್ಗಗಳು, ನೇರವಾಗಿಯೋ ವಕ್ರವಾಗಿಯೋ ಇರಬಹುದು; ಆದರೆ ಅವೆಲ್ಲವೂ ಒಬ್ಬನೇ ಭಗವಂತನನ್ನು ಸೇರುತ್ತವೆ ಎಂಬ ಭಾವನೆಯುಳ್ಳ ಶಿವಮಹಿಮ್ನ ಸ್ತೋತ್ರ ಮೊದಲನೆಯದು. **"ಯಾರೇ ಆಗಲಿ, ಯಾವ ರೂಪದಲ್ಲಿಯೇ ಬರಲಿ – ನಾನು ಅವರನ್ನು ಸ್ವೀಕರಿಸುತ್ತೇನೆ. ವಿವಿಧ ಪಥಗಳಲ್ಲಿ ನನ್ನ ಬಳಿ ಬರಲು ಯತ್ನಿಸುತ್ತಿರುವ ಜನರು ನನ್ನನ್ನೇ ಸೇರುತ್ತಾರೆ"** ಎಂಬ ಭಗವದ್ಗೀತೆಯ ವಾಕ್ಯ ಎರಡನೆಯದು. ಈ ಎರಡೂ ನಿದರ್ಶನಗಳು ಪ್ರಾಚೀನ ಸನಾತನಧರ್ಮದ ವಿಶ್ವ ವೈಶಾಲ್ಯದ ಉತ್ತಮ ಸಂಕೇತಗಳಾಗಿವೆ.

**ಕಳಕಳಿಯ ಆಶಯ:** ತಮ್ಮ ಭಾಷಣವನ್ನು ಈ ಕಳಕಳಿಯ ಆಶಯದೊಂದಿಗೆ ಸ್ವಾಮೀಜಿ ಸಮಾಪನಗೊಳಿಸುತ್ತಾರೆ: ಮತಾಂಧತೆಯು ಹಿಂಸೆ ಮತ್ತು ರಕ್ತಪಾತಗಳಿಂದ ಈ ಜಗತ್ತನ್ನು ತುಂಬಿದೆ; ನಾಗರಿಕತೆಯನ್ನೇ ನಾಶಗೊಳಿಸಿ, ರಾಷ್ಟ್ರರಾಷ್ಟ್ರಗಳನ್ನೇ ನಿರಾಶೆಯ ಕೂಪಕ್ಕೆ ತಳ್ಳಿದೆ. ಈ ಸಮಾರಂಭದ ಆರಂಭದಲ್ಲಿ ಮೊಳಗಿದ ಘಂಟಾನಾದ ಎಲ್ಲ ಬಗೆಯ ಮತಾಂಧತೆಯ, ಹಿಂಸೆಯ ಮತ್ತು ಮನಸ್ತಾಪಗಳ ಅಂತ್ಯ ಕ್ರಿಯೆಯನ್ನು ಸೂಚಿಸುವ ಘಂಟಾನಾದವೂ ಆಗಲಿ.

## ಹಿಂದೂಧರ್ಮದ ಮೇಲೆ ಪ್ರಬಂಧ ಮಂಡನೆ

**'ನಮ್ಮಲ್ಲಿ ಏಕೆ ಒಮ್ಮತವಿಲ್ಲ?' :** ಸ್ವಾಮೀಜಿ, ೧೮೯೩ರ ಸೆಪ್ಟೆಂಬರ್ ೧೫ ರಂದು 'ನಮ್ಮಲ್ಲಿ ಏಕೆ ಒಮ್ಮತವಿಲ್ಲ?' ಎನ್ನುವುದನ್ನು ಸ್ವಾರಸ್ಯವಾಗಿ ನಿರೂಪಿಸುವ ಕಥೆಯೊಂದನ್ನು ತಮ್ಮ ಪುಟ್ಟ ಭಾಷಣದಲ್ಲಿ ಹೇಳುತ್ತಾರೆ. ವಿವಿಧ ಧರ್ಮಗಳಿಗೆ ಸೇರಿದವರು ತಮ್ಮ ತಮ್ಮ ಪುಟ್ಟ ಪ್ರಪಂಚಗಳ ಬಾವಿಯಲ್ಲಿ ಕುಳಿತು, ಇಡೀ ಪ್ರಪಂಚವೆಂದರೆ ಇಷ್ಟೇ ಎಂದು ಭಾವಿಸಿರುವುದೇ ಇದಕ್ಕೆ ಕಾರಣ ಎಂದು ವಿವರಿಸುತ್ತಾರೆ; ಈ ಗೋಡೆಗಳನ್ನು ಒಡೆದುಹಾಕಲು ಪ್ರಯತ್ನಿಸುತ್ತಿರುವ ಅಮೆರಿಕನ್ನರಿಗೆ ತುಂಬು ಕೃತಜ್ಞತೆಗಳನ್ನು ಸಮರ್ಪಿಸುತ್ತಾರೆ.

**ಪ್ರಬಂಧದ ಮಹತ್ವ :** ವಿಶ್ವಧರ್ಮ ಸಮ್ಮೇಳನದಲ್ಲಿ ಸ್ವಾಮೀಜಿ ಮಾಡಿದ ಅತ್ಯಂತ ಪ್ರಮುಖ ಭಾಷಣವೆಂದರೆ, ೧೮೯೩, ಸೆಪ್ಟೆಂಬರ್ ೧೯ರಂದು 'ಹಿಂದೂಧರ್ಮ' ದ ಮೇಲೆ ಅವರು ಮಂಡಿಸಿದ ಪ್ರಬಂಧ. ಇದು ಸಮಗ್ರ ಹಿಂದೂಧರ್ಮವನ್ನು ಒಗ್ಗೂಡಿಸುವ ತಾತ್ತ್ವಿಕ ಭಾವನೆಗಳ ಮೇಲೆ ಬೆಳಕು ಚೆಲ್ಲುತ್ತದೆ. ಹಾಗೆಯೇ ಹಿಂದೂಗಳ ಆಚಾರ ಪದ್ಧತಿ, ಅದರಲ್ಲೂ ವಿಗ್ರಹಾರಾಧನೆಯು ಎಷ್ಟೊಂದು ಪ್ರಾಯೋಗಿಕ ಮೌಲ್ಯವುಳ್ಳದ್ದು ಎನ್ನುವುದನ್ನು ಪರಿಚಯಿಸುತ್ತದೆ. ಇದು ಪಾಶ್ಚಾತ್ಯರನ್ನು ದೃಷ್ಟಿಯಲ್ಲಿರಿಸಿಕೊಂಡು ಬರೆದ ಪ್ರಬಂಧವಾದರೂ, ಹಿಂದೂಗಳಿಗೆ ತಮ್ಮ ಧರ್ಮದ ನೈಜಸ್ವರೂಪವನ್ನೂ, ಅಂತರಾರ್ಥವನ್ನೂ ಸುಸ್ಪಷ್ಟವಾಗಿ ತಿಳಿಸಿಕೊಡುವ ಅಧಿಕೃತ ದಾಖಲೆಯೂ ಆಗಿದೆ. ಹಾಗೆಯೇ ಇದು ಒಂದು ಐತಿಹಾಸಿಕ ಸಂದಿಗ್ಧ ಪರಿಸ್ಥಿತಿಯಲ್ಲಿ ಹಿಂದೂಧರ್ಮದ ಪುನರುತ್ಥಾನಕ್ಕೆ ಮತ್ತು ಪುನರ್ನವೀಕರಣಕ್ಕೆ ಕಾರಣವಾದ ಚರಿತ್ರಾರ್ಹ ಪ್ರವಚನವೂ ಆಗಿದೆ.

**ಪ್ರಬಂಧದ ಉದ್ದೇಶ:** ಭಾರತೀಯ ಮೂಲದ ವೈದಿಕ ಧರ್ಮ ನೂರಾರು ಸವಾಲುಗಳನ್ನು ಎದುರಿಸಿಯೂ ಇಂದಿಗೂ ಚಿರಂತನವಾಗಿ ಉಳಿದುಬಂದಿದೆ. 'ಹಿಂದೂಧರ್ಮ'ವೆಂದು ಪ್ರಸಿದ್ಧವಾಗಿರುವ ಇದರಲ್ಲಿ, ವೇದಾಂತದ ಉನ್ನತ ತತ್ತ್ವಗಳಿಂದ ಹಿಡಿದು, ಕ್ಷುಲ್ಲಕವೆನಿಸುವ ಆಚರಣೆಗಳವರೆಗೆ ಎಲ್ಲದಕ್ಕೂ ಹಾಗೂ ಬೌದ್ಧರ ಅಜ್ಞೇಯತಾವಾದಕ್ಕೂ ಮತ್ತು ಜೈನರ ನಾಸ್ತಿಕತೆಗೂ ಸ್ಥಾನವಿದೆ. ಹೀಗೆ ಭಿನ್ನ ಭಿನ್ನವಾದ, ತೋರಿಕೆಗೆ ಪರಸ್ಪರ ವಿರೋಧವೆನಿಸುವ ಈ ಮೇಲಿನ ಭಾವನೆಗಳಿಗೆ ತಳಹದಿಯಾಗಿರುವುದು, ಕೇಂದ್ರಬಿಂದುವಾಗಿರುವುದು ಅದಾವುದು? "ನಾನು ಉತ್ತರಿಸಬೇಕೆಂದಿರುವ ಪ್ರಶ್ನೆಯೇ ಇದು" ಎಂದು ಘೋಷಿಸುವುದರ ಮೂಲಕ, ಸ್ವಾಮೀಜಿ ತಮ್ಮ ಪ್ರಬಂಧದ ಉದ್ದೇಶವನ್ನು ಸ್ಪಷ್ಟಪಡಿಸುತ್ತಾರೆ.

**ವೈದಿಕ ಭಾವನೆ:** ಹಿಂದೂಧರ್ಮದ ಮೂಲ ವೇದ. ಈ ಪದವು ಯಾವ ಒಂದು ಪುಸ್ತಕಕ್ಕೂ ಅನ್ವಯಿಸುವುದಿಲ್ಲ. ಬೇರೆ ಬೇರೆ ವ್ಯಕ್ತಿಗಳು, ಬೇರೆ ಬೇರೆ ಕಾಲಗಳಲ್ಲಿ ಕಂಡುಹಿಡಿದ ಆಧ್ಯಾತ್ಮಿಕ ನಿಯಮಗಳ ಭಂಡಾರವೇ ವೇದ. ಅಂತಹ ವ್ಯಕ್ತಿಗಳನ್ನು 'ಋಷಿಗಳು' ಎಂದು ಕರೆಯುತ್ತಾರೆ. ಅವರು ಆ ನಿಯಮಗಳನ್ನು ಕಂಡುಹಿಡಿದವರು ಮಾತ್ರ. ಆ ನಿಯಮಗಳು ಯಾವಾಗಲೂ ಇದ್ದವು. ಇಲ್ಲಿಂದ ಮುಂದೆ ಸ್ವಾಮೀಜಿ ಉಪನಿಷತ್ತುಗಳಲ್ಲಿ ಹೇಳಿರುವ ಜ್ಞಾನಯೋಗವನ್ನು ವಿವರಿಸಲು ತೊಡಗುತ್ತಾರೆ.

**ಸೃಷ್ಟಿ, ಸೃಷ್ಟಿಕರ್ತ, ಆತ್ಮ:** ವೇದಗಳ ಹಾಗೆ ಸೃಷ್ಟಿಗೂ ಆದಿ ಅಂತ್ಯಗಳಿಲ್ಲ. ಏನೂ ಇಲ್ಲದ ಕಾಲ ಎಂಬುದು ಇರಲೇ ಇಲ್ಲ. ಇದೇ ಆಧುನಿಕ ವಿಜ್ಞಾನದ ಅಭಿಪ್ರಾಯ ಕೂಡ. ಸೃಷ್ಟಿ

ಸೃಷ್ಟಿಕರ್ತ – ಎರಡಕ್ಕೂ ಆದಿ ಅಂತ್ಯಗಳಿಲ್ಲ. ಸೃಷ್ಟಿಯ ಈ ನಿಯಮವನ್ನು ನಮ್ಮ ವ್ಯಕ್ತಿತ್ವಕ್ಕೂ ಅನ್ವಯಿಸಿಕೊಳ್ಳಬಹುದು. ದೇಹ ಸಾಯುತ್ತದೆ. ಆದರೆ ಅದರೊಳಗಿರುವ 'ನಾನು' ಎನ್ನುವುದು ಸಾಯುವುದಿಲ್ಲ. ಅದನ್ನೇ 'ಆತ್ಮ' ವೆಂದು ಕರೆಯುವುದು. ಅದು ಸಂಯುಕ್ತವಸ್ತು ಅಲ್ಲ. ಆದ್ದರಿಂದಲೇ ಅದಕ್ಕೆ ಸಾವಿಲ್ಲ. ಆತ್ಮವನ್ನು ದೇವರು ಸೃಷ್ಟಿಸಿದ ಎನ್ನುವುದಾದರೆ, ಅವನು ಬಹಳ ಕ್ರೂರಿ ಎನ್ನಬೇಕಾಗುತ್ತದೆ. ಏಕೆಂದರೆ, ಜೀವಿಗಳಲ್ಲಿ ತಾರತಮ್ಯ, ದುಃಖ – ಇವುಗಳನ್ನು ಕಾಣುತ್ತೇವೆ. ಜೀವಿಯ ಪೂರ್ವಕರ್ಮಗಳೇ ಅವನ ದುಃಖಕ್ಕೆ ಅಥವಾ ಸುಖಕ್ಕೆ ಕಾರಣ. ಇದರಲ್ಲಿ ದೇವರದೇನೂ ಪಾತ್ರವಿಲ್ಲ.

**ದೇಹಧಾರಣೆಯ ರಹಸ್ಯ:** ಮನುಷ್ಯರಲ್ಲಿ ಕಾಣಬರುವ ಪ್ರವೃತ್ತಿಗಳಿಗೆ ಅನುವಂಶೀಯತೆಯೇ ಕಾರಣ ಎಂದು ಆಧುನಿಕ ವಿಜ್ಞಾನ ಹೇಳುತ್ತದೆ. ಆದರೆ ಇದು ಭಾಗಶಃ ಸತ್ಯ ಎಂದು ಸ್ವಾಮೀಜಿ ವಾದಿಸುತ್ತಾರೆ. ಪ್ರತಿಯೊಂದು ಜೀವಿಗೂ ಒಂದು ವಿಶಿಷ್ಟವಾದ ಪ್ರವೃತ್ತಿಯಿದೆ. ಅವು ಉಂಟಾಗುವುದು ಪೂರ್ವಕರ್ಮದಿಂದ. ನಿರ್ದಿಷ್ಟ ಪ್ರವೃತ್ತಿಯ ಜೀವಿಯು, ಆ ಪ್ರವೃತ್ತಿಯನ್ನು ಪ್ರಕಟಪಡಿಸಲು ಸೂಕ್ತವಾದ ದೇಹದಲ್ಲಿ ಜನ್ಮತಾಳುತ್ತದೆ. ಅಭ್ಯಾಸಗಳಿಂದ ಎಲ್ಲವೂ ಉಂಟಾಗುತ್ತದೆ ಎನ್ನುವ ವೈಜ್ಞಾನಿಕ ಭಾವನೆ ಸರಿಯೇ. ಆದರೆ, ವ್ಯಕ್ತಿಯಲ್ಲಿ ಸಹಜವಾಗಿ ಕಾಣಿಸಿಕೊಳ್ಳುವ ಎಲ್ಲ ಅಭ್ಯಾಸಗಳೂ ಈ ಜನ್ಮದಲ್ಲಿ ಪಡೆದಂಥವಲ್ಲ. ಅವು ಪೂರ್ವಜನ್ಮದಿಂದಲೇ ಬಂದಿರಬೇಕು. ಪೂರ್ವಜನ್ಮದ ಸ್ಮೃತಿಯನ್ನು ಪಡೆಯಲು ಸಾಧ್ಯ. ಇದೇ ಜೀವಿಯ ರಹಸ್ಯವನ್ನು ಹೊರಗೆಳೆಯುವ ಸಾಧನ.

**ಆತ್ಮವಿಚಾರ:** ಜೀವಿಯ ರಹಸ್ಯವಿರುವುದು ಆತ್ಮವಿಷಯದಲ್ಲಿ. ಹಾಗೆಂದೇ ತಾನು ಆತ್ಮವೆಂದೂ, ಅದು ಅವಿನಾಶಿಯೆಂದೂ ಪ್ರತಿಯೊಬ್ಬ ಹಿಂದುವೂ ನಂಬುತ್ತಾನೆ. ಆತ್ಮವೆಂದರೆ, ಪರಿಧಿಯಿಲ್ಲದ ಒಂದು ಅನಂತ ವೃತ್ತ. ಅದರ ಕೇಂದ್ರವಿರುವುದು ದೇಹದಲ್ಲಿ. ಸಾವು ಎಂದರೆ, ಒಂದು ದೇಹದಿಂದ ಇನ್ನೊಂದು ದೇಹಕ್ಕೆ ಆ ಕೇಂದ್ರದ ವರ್ಗಾವಣೆ ಮಾತ್ರ. ಆತ್ಮವು ಭೌತವಸ್ತುವಲ್ಲ. ಭೌತಿಕ ನಿಯಮಗಳು ಅದಕ್ಕೆ ಅನ್ವಯಿಸುವುದಿಲ್ಲ. ಹೀಗಾಗಿ ಅದು ಸ್ವತಂತ್ರ.

**ಋಷಿವಾಣಿ:** ಆತ್ಮವು ಹೀಗೆ ಸ್ವತಂತ್ರವಾಗಿದ್ದರೂ, ಕಾರ್ಯಕಾರಣಗಳ ಒಂದು ಬಂಧನಕ್ಕೆ ಸಿಲುಕಿದಂತಿದೆ. ಇದು ಜೀವಿಗಳನ್ನು ದುಃಖಶೋಕಗಳಿಗೆ ಈಡುಮಾಡಿದೆ. ಇದು ಪ್ರಕೃತಿಯ ನಿಯಮ. ಇದಕ್ಕೆ ಪರಿಹಾರವಿದೆ ಎನ್ನುತ್ತಾರೆ ನಮ್ಮ ಪುರಾತನ ಋಷಿಮುನಿಗಳು. ಅಂತಹವರಲ್ಲಿ ಒಬ್ಬನು ಇಡೀ ಜಗತ್ತಿನ ಎದುರಿಗೆ ನಿಂತು, ಜಯಘೋಷದಿಂದ ಈ ಆನಂದದ ಸುದ್ದಿಯನ್ನು ಸಾರುತ್ತಾನೆ: "ಅಮೃತಪುತ್ರರೇ ಕೇಳಿ, ಸ್ವರ್ಗಧಾಮದಲ್ಲಿರುವವರು ಕೂಡ ಕೇಳಿ. ಮೋಹದಾಚೆ, ಕತ್ತಲಿನಾಚೆ ಇರುವ ಸನಾತನ ಪುರುಷನನ್ನು ನಾನು ನೋಡಿದ್ದೇನೆ. ಅವನನ್ನು ಸಾಕ್ಷಾತ್ಕಾರ ಮಾಡಿಕೊಂಡರೆ ಮಾತ್ರ, ನೀವು ಸಾವಿನಿಂದ ಪಾರಾಗಬಹುದು." ಸ್ವಾಮೀಜಿ 'ಅಮೃತಪುತ್ರರೇ' ಎನ್ನುವ ಮಾತಿಗೆ ಒತ್ತು ಕೊಡುತ್ತಾರೆ. ಅವರು ಹೇಳುತ್ತಾರೆ: **"ಪಾಪಿಗಳು ಎಂದು ಮಾನವನನ್ನು ಕರೆಯುವುದೇ ಘೋರ ಪಾತಕ, ಮಾನವ ಸ್ವಭಾವಕ್ಕೆ ಬಗೆಯುವ ಮಹಾದ್ರೋಹ. ಸಿಂಹಗಳೇ, ಬನ್ನಿ... ಅಮೃತಾತ್ಮರು ನೀವು, ಮುಕ್ತಾತ್ಮರು ನೀವು, ಆನಂದಮಯರು ನೀವು, ನಿತ್ಯಾತ್ಮರು ನೀವು."**

**ಉಪನಿಷತ್ತಿನ ಸಾರ:** ಉಪನಿಷತ್ತುಗಳ ಸಂದೇಶವನ್ನು ಸ್ವಾಮೀಜಿ ಸಾರಸಂಗ್ರಹವಾಗಿ ಹೇಳುತ್ತಾರೆ: "ಪ್ರಕೃತಿನಿಯಮಗಳನ್ನೆಲ್ಲ ಮೆಟ್ಟಿನಿಂತು, ಪ್ರತಿಯೊಂದು ಕಣದ ಅಂತರಾಳದಲ್ಲಿ ಕೂಡ ಒಬ್ಬ ಮಹಾಪುರುಷನು ಇದ್ದಾನೆ." ಆ ಭಗವಂತನನ್ನು, ಪರಿಶುದ್ಧ, ನಿರಾಕಾರ, ಸರ್ವಶಕ್ತ ಮತ್ತು ದಯಾಸಿಂಧು ಎಂದು ಸ್ವಾಮೀಜಿ ಬಣ್ಣಿಸುತ್ತಾರೆ.

**ಪ್ರೇಮದ ಆರಾಧನೆ:** ಇಂತಹ ಭಗವಂತನನ್ನು ಪೂಜಿಸುವುದು ಹೇಗೆ? ಸ್ವಾಮೀಜಿ ಹೇಳುತ್ತಾರೆ, ಪ್ರೀತಿಯ ಮೂಲಕ ಎಂದು. "ಈ ಜೀವನದಲ್ಲಿ ಸಿಕ್ಕುವ ಎಲ್ಲ ವಸ್ತುಗಳಿಗಿಂತಲೂ ಪ್ರಿಯತಮ ಎಂದು ತಿಳಿದು ಅವನನ್ನು ಪೂಜಿಸಬೇಕು." ಇದೇ ವೇದಗಳಲ್ಲಿ ಹೇಳಿರುವ ಪ್ರೀತಿಯ ಸಿದ್ಧಾಂತ. ಇದನ್ನೇ ಭಗವದ್ಗೀತೆಯಲ್ಲಿ ಶ್ರೀಕೃಷ್ಣನು ಪರಿಪುಷ್ಟಗೊಳಿಸಿ ಬೋಧಿಸುತ್ತಾನೆ. ಈ ಮೇಲಿನ ಮಾತುಗಳಿಂದ ಸ್ವಾಮೀಜಿ ಜ್ಞಾನಯೋಗಕ್ಕೆ ಪೂರಕವಾಗಿ ಭಕ್ತಿಯೋಗವನ್ನು ವಿವರಿಸಲು ತೊಡಗುತ್ತಾರೆ.

**ಭಗವದ್ಗೀತೆಯ ಬೋಧನೆ:** ಸ್ವಾಮೀಜಿ ಭಗವದ್ಗೀತೆಯ ಸಾರವನ್ನು ಅತ್ಯಂತ ಸರಳವಾದ ಮಾತುಗಳಲ್ಲಿ ಹೀಗೆ ನಮ್ಮ ಮುಂದಿಡುತ್ತಾರೆ: "ಅವನ (ಶ್ರೀಕೃಷ್ಣನ) ಬೋಧನೆ ಇದು: ಮಾನವನು ಪದ್ಮಪತ್ರದಂತೆ ಜಗತ್ತಿನಲ್ಲಿ ಇರಬೇಕು. ಅದು ನೀರಿನಲ್ಲಿ ಬೆಳೆಯುತ್ತದೆ. ಆದರೆ ಒದ್ದೆಯಾಗುವುದಿಲ್ಲ. ಅದರಂತೆಯೇ ಮಾನವನು ಜಗತ್ತಿನಲ್ಲಿರಬೇಕು. ಆದರೆ ಅವನ ಹೃದಯ ಮಾತ್ರ ಪರಮಾತ್ಮನಲ್ಲಿರಬೇಕು, ಕೈಗಳು ಕೆಲಸದಲ್ಲಿ ನಿರತವಾಗಿರಬೇಕು."

**ಉತ್ತಮ ಭಕ್ತನ ಪ್ರಾರ್ಥನೆ:** ಪ್ರತಿಫಲಾಪೇಕ್ಷೆ ಇಲ್ಲದೆ ನಿಃಸ್ವಾರ್ಥಭಾವನೆಯಿಂದ, ಕೇವಲ ಪ್ರೀತಿಸುವುದಕ್ಕಾಗಿಯೇ ಪ್ರೀತಿಯನ್ನು ಅನುಗ್ರಹಿಸೆಂದು ಭಗವಂತನನ್ನು ಬೇಡಿಕೊಳ್ಳುವವನೇ ಉತ್ತಮ ಭಕ್ತ. ಇದಕ್ಕೆ ನಿದರ್ಶನವಾಗಿ ಯುಧಿಷ್ಠಿರನ ಉದಾಹರಣೆಯನ್ನು ಸ್ವಾಮೀಜಿ ನೀಡುತ್ತಾರೆ. ಯುಧಿಷ್ಠಿರನ ಪ್ರಕಾರ, ಎಲ್ಲ ವಿಧದ ಸೌಂದರ್ಯದ, ಭವ್ಯತೆಯ ಮೂಲವೇ ಭಗವಂತ. ಅವನೊಬ್ಬನೇ ಪ್ರೀತಿಸಬೇಕಾದ ಏಕಮಾತ್ರ ವಸ್ತು. "ಅದಕ್ಕೇ ನಾನು ಪ್ರೀತಿಸುವುದು. ಅವನು ಇಚ್ಛೆಬಂದ ಕಡೆ ನನ್ನನ್ನು ಇಡಲಿ. ಪ್ರೇಮಕ್ಕಾಗಿ ನಾನು ಅವನನ್ನು ಪ್ರೀತಿಸಲೇಬೇಕು. ಪ್ರೀತಿಯಲ್ಲಿ ವ್ಯವಹಾರವನ್ನು ತರುವುದು ನನಗೆ ಇಷ್ಟವಿಲ್ಲ"– ಇವು ಯುಧಿಷ್ಠಿರನ ಮುತ್ತಿನಂತಹ ಮಾತುಗಳು.

**ಮುಕ್ತಿ, ಸಾಕ್ಷಾತ್ಕಾರ:** ಜೀವಿಯು ಪ್ರಕೃತಿಯ ಬಂಧನದಿಂದ ಬಿಡಿಸಿಕೊಳ್ಳುವುದನ್ನೇ ಮುಕ್ತಿ ಅಥವಾ ಬಿಡುಗಡೆ ಎನ್ನುತ್ತಾರೆ.

ದೇವರ ದಯದಿಂದ ಮಾತ್ರವೇ ಇದು ದೊರಕುವುದು. ದೇವರ ದಯೆ ಬೇಕಾದರೆ, ನಾವು ಪರಿಶುದ್ಧರಾಗಬೇಕು. ಪರಿಶುದ್ಧರಿಗೆ ಮಾತ್ರವೇ ಅವನು ಕಾಣಿಸಿಕೊಳ್ಳುವನು. ಈ ಬಗೆಯ ಸಾಕ್ಷಾತ್ಕಾರವೇ ಹಿಂದೂಧರ್ಮದ ಕೇಂದ್ರ ಎನ್ನುತ್ತಾರೆ, ಸ್ವಾಮೀಜಿ. ಇದೇ ದೇವರ ಅಥವಾ ಆತ್ಮದ ವಿಚಾರವಾಗಿ ಒಬ್ಬ ಹಿಂದೂ ನೀಡುವ ಪ್ರಮಾಣ. ಹೀಗೆ ಸಂಪ್ರದಾಯದಲ್ಲಿ ಹೇಳಿರುವ ಶಾಸ್ತ್ರಪ್ರಮಾಣಕ್ಕಿಂತಲೂ, ಅನುಭವವೇ ಶ್ರೇಷ್ಠ ಎಂಬ ಕ್ರಾಂತಿಕಾರಿ ನಿಲುವನ್ನು ಸ್ವಾಮೀಜಿ ಪ್ರತಿಪಾದಿಸುತ್ತಾರೆ. ಮುಕ್ತಿಯು ಪರಿಪೂರ್ಣತೆಯನ್ನು ತಂದುಕೊಡುತ್ತದೆ. 'ಪರಿಪೂರ್ಣ'ವೆಂಬುದು ಎರಡಾಗಿರಲು ಸಾಧ್ಯವಿಲ್ಲ. ಹೀಗಾಗಿ ಪರಿಪೂರ್ಣತೆ ಹೊಂದಿದ ವ್ಯಕ್ತಿ ದೇವರೊಡನೆ ಒಂದಾಗಲೇಬೇಕು. ದೇವರು ಅಥವಾ ಬ್ರಹ್ಮ ವೆಂಬುದು ಕೇವಲ ಸತ್‌ಸ್ವರೂಪಿ, ಕೇವಲ ಚಿತ್‌ಸ್ವರೂಪಿ, ಕೇವಲ ಆನಂದಸ್ವರೂಪಿ. ಇದರೊಂದಿಗೆ ಒಂದಾಗುವ ವ್ಯಕ್ತಿ ವಿಶ್ವವ್ಯಕ್ತಿತ್ವವನ್ನು ಪಡೆಯುತ್ತಾನೆ, ಅವನ ಕ್ಷುದ್ರ ವ್ಯಕ್ತಿತ್ವ ಮರೆಯಾಗುತ್ತದೆ. ಈ ತತ್ತ್ವದಲ್ಲಿನ ವೈಜ್ಞಾನಿಕ ಅಂಶವನ್ನು ಸ್ವಾಮೀಜಿ ಎತ್ತಿತೋರಿಸುತ್ತಾರೆ: "ವ್ಯಕ್ತಿ ಅಸ್ತಿತ್ವದಲ್ಲಿ ಸಮಶ್ರುತಿ ಹೊಂದಿದಾಗ ಮಾತ್ರ ಮೃತ್ಯು ನಿಷ್ಕ್ರಿಯವಾಗುತ್ತದೆ. ವ್ಯಕ್ತಿ ಆನಂದದಲ್ಲಿ ಲೀನವಾದಾಗ ಮಾತ್ರ ದುಃಖ ಮರೆಯಾಗು ತ್ತದೆ. ವ್ಯಕ್ತಿ ಜ್ಞಾನವೇ ಆದಾಗ ಮಾತ್ರ ದೋಷಗಳೆಲ್ಲ ನಾಶ ಗೊಳ್ಳುತ್ತವೆ."

**ಹಿಂದೂಧರ್ಮವೆಂದರೇನು?:** ಈ ಹಿನ್ನೆಲೆಯಲ್ಲಿ ಹಿಂದೂ ಧರ್ಮಕ್ಕೆ ಸರ್ವಸಮ್ಮತವಾದ ವ್ಯಾಖ್ಯೆಯನ್ನು ಸ್ವಾಮೀಜಿ ನೀಡುತ್ತಾರೆ: **"ಮುಕ್ತಾತ್ಮರಾಗಲು, ಪವಿತ್ರಾತ್ಮರಾಗಲು, ದೇವ ರನ್ನು ಸೇರಲು ಮತ್ತು ದೇವರನ್ನು ನೋಡಲು ಅನವರತ ಹೋರಾಡುವುದೇ ಹಿಂದೂಗಳ ಸಿದ್ಧಾಂತದ ಗುರಿ. ಹೀಗೆ ದೇವರನ್ನು ಸೇರುವುದೇ, ದೇವರನ್ನು ನೋಡುವುದೇ, ಪರಂಧಾಮದಲ್ಲಿರುವ ಭಗವಂತನಂತೆ ನಾವೂ ಪವಿತ್ರಾತ್ಮ ರಾಗುವುದೇ ಹಿಂದೂಧರ್ಮ."** ಸ್ವಾಮೀಜಿಯ ಪ್ರಕಾರ, ಹಿಂದೂಧರ್ಮವೆಂದರೆ ಸಿದ್ಧಾಂತಗಳನ್ನು ನಂಬುವುದಲ್ಲ, ಸತ್ಯ ಸಾಕ್ಷಾತ್ಕಾರ ಪಡೆಯುವುದು – ಅದರಂತೆ ಆಗುವುದು.

**ವಿಜ್ಞಾನ–ಧರ್ಮ:** ವಿಜ್ಞಾನ ಮತ್ತು ಧರ್ಮಗಳೆರಡೂ ಐಕ್ಯತೆ ಯನ್ನೇ ತಮ್ಮ ಗುರಿಯನ್ನಾಗಿಸಿಕೊಂಡಿವೆ. "ನಿರಂತರವಾಗಿ ಬದಲಾಗುತ್ತಿರುವ ಈ ಜಗತ್ತಿಗೆ ಯಾರು ಆಧಾರಭೂತನೋ, ಉಳಿದೆಲ್ಲ ಜೀವಿಗಳು ಯಾವ ಒಂದು ಆತ್ಮದ ತೋರಿಕೆಯ ವ್ಯಕ್ತರೂಪಗಳೋ ಅವನನ್ನು ಕಂಡುಹಿಡಿದಾಗ ಧರ್ಮ ಪರಿಪೂರ್ಣತೆಯನ್ನು ಪಡೆಯುತ್ತದೆ." ವಿಜ್ಞಾನದ ಗುರಿಯೂ ಇದೇ ಆಗಿದೆ; ವಿಜ್ಞಾನ ಅಂತಿಮವಾಗಿ ಇದೇ ಸಿದ್ಧಾಂತಕ್ಕೆ ಬಂದೇ ತೀರುತ್ತದೆ ಎಂದು ಸ್ವಾಮೀಜಿ ಪ್ರತಿಪಾದಿಸುತ್ತಾರೆ; ಆ ಮೂಲಕ ಹಿಂದೂಧರ್ಮದಲ್ಲಿ ಸಹಜವಾಗಿಯೇ ಕಂಡು ಬರುವ ಧರ್ಮ ಮತ್ತು ವಿಜ್ಞಾನಗಳ ಸಾಮರಸ್ಯವನ್ನು ಎತ್ತಿ ತೋರಿಸುತ್ತಾರೆ.

**ಮತಧರ್ಮ ಮತ್ತು ಆಚರಣೆ :** ಭಾರತದಲ್ಲಿ ಇರುವುದು ಬಹುದೇವತಾವಾದ ಅಲ್ಲ; ಪ್ರತಿಯೊಂದು ದೇವತಾರೂಪಕ್ಕೂ, ಸರ್ವವ್ಯಾಪಿ ಮುಂತಾದ ಎಲ್ಲ ಗುಣಗಳನ್ನು ಆರೋಪಿಸಿ ಆರಾಧಿಸುವ ವಿಶಿಷ್ಟವಿಧಾನ ಎಂದು ಸ್ವಾಮೀಜಿ ಹೇಳುತ್ತಾರೆ. "ಗುಲಾಬಿಯನ್ನು ಬೇರೆ ಯಾವ ಹೆಸರಿನಿಂದ ಕರೆದರೂ, ಅದು ಅಷ್ಟೇ ಕಂಪನ್ನು ಬೀರುತ್ತದೆ" ಎಂಬ ಸುಂದರ ಉದಾಹರಣೆಯನ್ನು ಕೊಡುತ್ತಾರೆ. ವಿಗ್ರಹಾರಾಧನೆ ಮೂಢ ನಂಬಿಕೆಯಲ್ಲ. ಇದು ಅತ್ಯಂತ ಸಹಜವಾದ ಮನೋವೈಜ್ಞಾನಿಕ ಪ್ರಕ್ರಿಯೆ. ಯಾವ ಭಾವನೆಯೇ ಆಗಲಿ, ಅದಕ್ಕೆ ರೂಪವನ್ನು ನೀಡದೆ ಮನಸ್ಸಿನಲ್ಲಿ ಏನನ್ನೂ ಆಲೋಚಿಸಲು ಆಗುವುದಿಲ್ಲ. ಹೊರಗೆ ಇರುವ ವಿಗ್ರಹ ಮನಸ್ಸಿನಲ್ಲಿ ಇರುವ ವಿಗ್ರಹವನ್ನು ಸ್ಮರಣೆಗೆ ತರುತ್ತದೆ; ಹಾಗೆಯೇ ಮನಸ್ಸಿನಲ್ಲಿ ಇರುವ ವಿಗ್ರಹ ಹೊರಗಿನ ವಿಗ್ರಹವನ್ನು ನೆನಪಿಗೆ ತರುತ್ತದೆ. ಇಲ್ಲಿ ಕೆಲಸ ಮಾಡುವುದು ಪರಸ್ಪರ ಸಹಯೋಗದ ನಿಯಮ. ಸರ್ವವ್ಯಾಪಕತ್ವ, ಅನಂತತೆ, ಪವಿತ್ರತೆ, ಸತ್ಯ ಮುಂತಾದ ಅಮೂರ್ತ ಭಾವನೆಗಳನ್ನು ಸಂಕೇತಗಳ ಮೂಲಕ ಮಾತ್ರವೇ ಅರ್ಥಮಾಡಿಕೊಳ್ಳಲು ಸಾಧ್ಯ. ಹಾಗೆಂದೇ ಹಿಂದೂಗಳು ಆ ಭಾವಗಳನ್ನು ಹಲವು ಆಕಾರ ಮತ್ತು ವಿಗ್ರಹಗಳೊಂದಿಗೆ ಹೊಂದಿಸಿಕೊಂಡಿದ್ದಾರೆ. ಹೀಗೆ ವಿಗ್ರಹಾರಾಧನೆಯ ಮಹತ್ವವನ್ನು ವೈಜ್ಞಾನಿಕವಾಗಿ ಸ್ವಾಮೀಜಿ ಎತ್ತಿ ಹಿಡಿಯುತ್ತಾರೆ.

**ಹಿಂದೂಗಳ ಉದಾರತೆ:** ಹಿಂದೂಧರ್ಮದಲ್ಲಿ ವಿಗ್ರಹಾರಾಧನೆ ಯೆನ್ನುವುದು ಒಂದು ಪ್ರಾಥಮಿಕ ಘಟ್ಟ ಮಾತ್ರ. ಹಿಂದೂಗಳ ಧರ್ಮ ನೆಲೆಸಿರುವುದು ಸಾಕ್ಷಾತ್ಕಾರದಲ್ಲಿ. ಹೀಗಾಗಿ ಹಿಂದೂ ಯಾವ ಬಗೆಯ ಧಾರ್ಮಿಕ ಆಚರಣೆಯನ್ನೂ ನಿಂದಿಸುವುದಿಲ್ಲ. ಮಾನವನ ಯಾತ್ರೆ ನಡೆಯುತ್ತಿರುವುದು ದೋಷದಿಂದ ಸತ್ಯದೆಡೆಗೆ ಅಲ್ಲ, ಸತ್ಯದಿಂದ ಸತ್ಯಕ್ಕೆ – ಸತ್ಯದ ಕೆಳಗಿನ ಸ್ತರದಿಂದ ಮೇಲಿನ ಸ್ತರಕ್ಕೆ. ಹೀಗಾಗಿ ಎಲ್ಲ ರೀತಿಯ ಆಚರಣೆಗಳೂ ಮಾನವನ ಆತ್ಮವು ತಾನು ಅನಂತ ಎಂದು ಗ್ರಹಿಸಿ, ಸಾಕ್ಷಾತ್ಕಾರ ಮಾಡಿಕೊಳ್ಳಲು ಪ್ರಯತ್ನಿಸುತ್ತಿರುವ ಬಗೆಬಗೆಯ ಪ್ರಯತ್ನಗಳು ಮಾತ್ರ.

**'ವಿವಿಧತೆಯಲ್ಲಿ ಏಕತೆ'** ಎನ್ನುವುದು ಪ್ರಕೃತಿನಿಯಮ. ಹಿಂದೂಗಳು ಅದನ್ನು ತಿಳಿದುಕೊಂಡಿದ್ದಾರೆ. ಹೀಗಾಗಿ ಮತಾಚಾರಗಳು, ಸಂಕೇತಗಳು ಬಗೆಬಗೆಯದಾಗಿರುವುದು ತಪ್ಪೇನಲ್ಲ. ಹೀಗಾಗಿ ಪ್ರತಿಯೊಬ್ಬ ವ್ಯಕ್ತಿಯೂ ಒಂದೇ ವಿಧವಾದ ಆಚರಣೆ ಅಥವಾ ಸಂಕೇತವನ್ನು ಒಪ್ಪಿಕೊಳ್ಳಬೇಕು ಎನ್ನುವ ಭಾವನೆ ಸರಿಯಲ್ಲ. ಒಬ್ಬನೇ ದೇವರು ಎಲ್ಲ ಧರ್ಮಗಳ ಸ್ಫೂರ್ತಿಶಕ್ತಿಯೂ ಆಗಿದ್ದಾನೆ. ಮೇಲ್ನೋಟಕ್ಕೆ ಕಾಣಬರುವ ವಿರೋಧಗಳು ಕೇವಲ ತೋರಿಕೆಯವು. "ಒಂದೇ ಸತ್ಯ ಬೇರೆ ಬೇರೆ ವಿಶಿಷ್ಟ ಗುಣಗಳುಳ್ಳ ವಿವಿಧ ಸಂದರ್ಭಗಳಿಗೆ ಹೊಂದಿಕೊಳ್ಳಲು ಪ್ರಯತ್ನಿಸುವಾಗ ಪರಸ್ಪರ ವಿರೋಧಗಳು ಕಾಣಿಸಿಕೊಳ್ಳುತ್ತವೆ, ಅಷ್ಟೇ." ಇದನ್ನೇ ಶ್ರೀಕೃಷ್ಣನು ಭಗವದ್ಗೀತೆಯಲ್ಲಿ ಹೀಗೆ ಹೇಳುತ್ತಾನೆ: